University of Mysore Ph.D. Fellowship order copy of Mr. Somashekara M.

# ಮೈಸೂರು ವಿಶ್ವವಿದ್ಯಾನಿಲಯ

(4.0 ಸ್ಕೇಲ್‌ನ 3.47 ಸಿಜಿಪಿಎಯೊಂದಿಗೆ ನ್ಯಾಕ್‌ನಿಂದ ಮರು ಮಾನ್ಯತೆ ಪಡೆದಿದೆ)
(ಎನ್‌ಐಆರ್‌ಎಫ್–2020 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 27ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 47ನೇ ಸ್ಥಾನ)

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು–570 005

**ವಿಷಯ: 2020–21ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಯನ್ನು ಪಿಹೆಚ್.ಡಿ. ಸಂಶೋಧನಾ ಶಿಷ್ಯವೇತನಕ್ಕೆ ಆಯ್ಕೆ ಮಾಡಿರುವ ಬಗ್ಗೆ:**

ಉಲ್ಲೇಖ: 1. ವಿ.ವಿ. ಪ್ರಕಟಣೆ ಸಂಖ್ಯೆ: ವಿಘ4/10/2020–21 ದಿನಾಂಕ: 15–10–2021
2. ದಿನಾಂಕ: 27.01.2021 ರಂದು ನಡೆದ ಆಯ್ಕೆ ಸಮಿತಿ ಸಭೆಯ ತೀರ್ಮಾನ

*****

**ಆದೇಶ ಸಂಖ್ಯೆ: ವಿಘ4/4/2020–21 ದಿನಾಂಕ: 08.02.2021** | 1524

ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ವತಿಯಿಂದ ನೀಡಲಾಗುವ 2020–21ನೇ ಸಾಲಿನ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಲ್ಲಿ ಈ ಕೆಳಗೆ ಸೂಚಿಸಲಾಗಿರುವ ವಿದ್ಯಾರ್ಥಿಯನ್ನು ಉಲ್ಲೇಖ(2)ರ ಆಯ್ಕೆ ಸಮಿತಿಯ ತೀರ್ಮಾನದಂತೆ, ಸಂಶೋಧನಾ ಶಿಷ್ಯವೇತನಕ್ಕೆ ಆಯ್ಕೆ ಮಾಡಲಾಗಿದೆ, ಸಂಶೋಧನಾ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿಭಾಗವಾರು ವಿವರ, ಮಾರ್ಗದರ್ಶಕರ ವಿವರ ಹಾಗೂ ಸಂಶೋಧನಾ ಶೀರ್ಷಿಕೆಯ ವಿವರಗಳನ್ನು ಕೆಳಕಂಡ ಪಟ್ಟಿಯಲ್ಲಿ ನೀಡಲಾಗಿದೆ.

| ವಿದ್ಯಾರ್ಥಿ ಹೆಸರು ಮತ್ತು ವಿಳಾಸ | ಜಾತಿ | ವಿಭಾಗ | ಮಾರ್ಗದರ್ಶಕರ ಹೆಸರು ಮತ್ತು ವಿಳಾಸ | ಸಂಶೋಧನಾ ಶೀರ್ಷಿಕೆಯ ವಿಷಯ |
|---|---|---|---|---|
| ಸೋಮಶೇಖರ್ ಎಂ. ಬಿನ್ ಮರುಳಸಿದ್ದಯ್ಯ ಎಸ್. # 186, ಡಾ. ಬಿ.ಆರ್. ಅಂಬೇಡ್ಕರ್ ಬೀದಿ, ಹೊಂಡರಬಾಳು ಮಧುವನಹಳ್ಳಿ (ಪೋ), ಕೊಳ್ಳೇಗಾಲ ತಾ, ಚಾಮರಾಜನಗರ ಜಿಲ್ಲೆ | SC | ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು | ಡಾ. ಕೆ.ಬಿ. ಪ್ರವೀಣ್ ಸಹ ಪ್ರಾಧ್ಯಾಪಕರು ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ ಮಾ.ಗಂ., ಮೈಸೂರು | A study on Environmental Awareness, attitude towards Environmental Pro-behavior Secondary School Students |

ಸಂಶೋಧಕರ ಶಿಷ್ಯವೇತನವು ಶಿಷ್ಯವೇತನಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಪ್ರಾರಂಭವಾಗುತ್ತದೆ. ಪಿಹೆಚ್.ಡಿ. ತಾತ್ಕಾಲಿಕ ನೋಂದಣಿಯ ದಿನಾಂಕದಿಂದ ಐದು ವರ್ಷಗಳ ತನಕ (ದಿ: 08.01.2025) ಅಥವಾ ಪಿಹೆಚ್.ಡಿ. ಮಹಾಪ್ರಬಂಧವನ್ನು ಅವಧಿಗೆ ಮುಂಚೆ ಸಲ್ಲಿಸಿದರೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಆ ದಿನಾಂಕದವರೆಗೆ ಮಾತ್ರ ಶಿಷ್ಯವೇತನ ದೊರೆಯುತ್ತದೆ. ಶಿಷ್ಯವೇತನ, HRA ಮತ್ತು ಸಾದಿಲ್ವಾರು ವೆಚ್ಚಗಳನ್ನು ಈ ಕೆಳಕಂಡಂತೆ ಪಡೆಯಲು ಆದೇಶಿಸಲಾಗಿದೆ.

**ಶಿಷ್ಯವೇತನದ ವಿವರ:**

| ಶಿಷ್ಯವೇತನ | ಶಿಷ್ಯವೇತನದ ಅವಧಿ | ಶಿಷ್ಯವೇತನ | ಮನೆ ಬಾಡಿಗೆ ಭತ್ಯೆ (16%) | ವಾರ್ಷಿಕ ಸಾದಿಲ್ವಾರು ವೆಚ್ಚ |
|---|---|---|---|---|
| ಕಿರಿಯ ಶಿಷ್ಯವೇತನ (JRF) | 2 ವರ್ಷ | 20,000/– | 3,200/– | ರೂ. 8,000/– |
| ಹಿರಿಯ ಶಿಷ್ಯವೇತನ (SRF) | 2 ವರ್ಷದ ನಂತರ | 22,000/– | 3,520/– | ರೂ. 10,000/– |

ಆಯ್ಕೆಗೊಂಡಿರುವ ಸಂಶೋಧನಾ ವಿದ್ಯಾರ್ಥಿಗಳು ಮೇಲ್ಕಂಡ ಷರತ್ತುಗಳಿಗೆ ಹಾಗೂ ವಿಶ್ವವಿದ್ಯಾನಿಲಯದ ನಿಯಮಕ್ಕೆ ಬದ್ಧರಾಗುವ ದೃಢೀಕರಣ ಪತ್ರಕ್ಕೆ ಸಹಿ ಮಾಡಿ ವರದಿ ಪತ್ರದೊಂದಿಗೆ ಈ ಕಛೇರಿಗೆ ಸಲ್ಲಿಸುವುದು. ಸದರಿ ಸಂಶೋಧನಾ ವಿದ್ಯಾರ್ಥಿಗೆ ನೀಡಲಾಗುವ ಶಿಷ್ಯವೇತನ, 16% HRA ಮತ್ತು ವಾರ್ಷಿಕ ಸಾದಿಲ್ವಾರು ವೆಚ್ಚವನ್ನು ಆಯಾಯ ವರ್ಷದ ವಿಶ್ವವಿದ್ಯಾನಿಲಯದ **"ಉತ್ತಮೀಕರಣ ಲೆಕ್ಕಶೀರ್ಷಿಕೆ"** ಯಿಂದ ಭರಿಸಲು ಆದೇಶಿಸಲಾಗಿದೆ.

ಆದೇಶದ ಮೇರೆಗೆ

ಕುಲಸಚಿವ

8/2/21

ಪ್ರತಿ:

1. **ಸೋಮಶೇಖರ್ ಎಂ. ಬಿನ್ ಮರುಳಸಿದ್ದಯ್ಯ ಎಸ್, # 186, ಡಾ.ಬಿ.ಆರ್. ಅಂಬೇಡ್ಕರ್ ಬೀದಿ, ಹೊಂಡರವಾಳು ಮಧುವನಹಳ್ಳಿ (ಪೋ), ಕೊಳ್ಳೆಗಾಲ ತಾ, ಚಾಮರಾಜನಗರ ಜಿಲ್ಲೆ**
2. ಅಧ್ಯಕ್ಷರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
   ಸಂಶೋಧನಾ ವಿದ್ಯಾರ್ಥಿಯು ವರದಿ ಮಾಡಿಕೊಳ್ಳುವ ಸಮಯದಲ್ಲಿ ದೃಢೀಕರಣ ಪ್ರಮಾಣ ಪತ್ರ ಮತ್ತು ಮೂಲ ದಾಖಲಾತಿಗಳ ಪರಿಶೀಲನೆಯೊಂದಿಗೆ ಸಂಶೋಧಕರು ಸ್ವಂತ ಬರವಣಿಗೆಯಲ್ಲಿ ವರದಿ ಮಾಡಿಕೊಂಡ ಪ್ರತಿಯನ್ನು ಉಪಕುಲಸಚಿವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಕಳುಹಿಸುವುದು
3. ಡಾ. ಕೆ. ಬಿ. ಪ್ರವೀಣ್, ಸಹ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು
4. ಮಾನ್ಯ ಕುಲಪತಿಯವರ/ಕುಲಸಚಿವರ/ಕುಲಸಚಿವರು (ಪರೀಕ್ಷಾಂಗ) ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
5. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
6. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು
7. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು
8. ಸಂಶೋಧಕರು ವಿದ್ಯಾರ್ಥಿನಿಲಯದಲ್ಲಿ ಪ್ರವೇಶಾತಿ ಪಡೆದರೆ ಶಿಕ್ಷಕ ಸಲಹೆಗಾರರು, ಪಿ.ಜಿ. ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್– 2, ಮೈ.ವಿ.ವಿ. ನಮ್ಮ ಕಛೇರಿಗೆ ಮಾಹಿತಿ ನೀಡುವುದು
9. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಮೈಸೂರು ವಿಭಾಗ, ಮೈಸೂರು
10. ಕಛೇರಿ ಪ್ರತಿ

